## ವಿಚಿತ್ರ ರುಚಿ ಮತ್ತು ಮೈಬಣ್ಣ

ಉದಯ ವಾಹಿನಿಯ 'ಉದಯ ಕಾಮಿಡಿ'ಯಲ್ಲಿ 'ಪುಟಾಣಿ ಏಜೆಂಟ್ ಒನ್ ಟೂ ತ್ರಿ' ಹೆಸರಿನ ಹೊಸ ಕಾರ್ಯಕ್ರಮ ಶುರುವಾಗಿದ್ದು, ಮೊದಲ ಹೆಜ್ಜೆಯಲ್ಲೇ ಎಡವಿದೆ ಅನ್ನಿಸುತ್ತಿದೆ. ನಿರೂಪಕರು ಸಣ್ಣ ಮಕ್ಕಳ ಜೊತೆ ಬೆರೆಯುವ ಪ್ರಯತ್ನ ಮೆಚ್ಚವಂತಹದ್ದು. ಆದರೆ ಅದು ಬಹಳ ಬದಲಾವಣೆಯನ್ನು ಬೇಡುತ್ತದೆ. ಜೊತೆಗೆ ಅತಿಥಿಗಳಾಗಿ ಆಗಮಿಸುವ ಮಕ್ಕಳಿಗೆ ದೇಹದ ಬಣ್ಣದ ಬಗ್ಗೆ ಕೇಳುವ ಪ್ರಶ್ನೆ ಕೀಳು ಅಭಿರುಚಿಯನ್ನು ತೋರಿಸುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ರಾಮಸ್ಮರಣೆಯಲ್ಲಿ ಮೊಳಗಿದ 'ಥಟ್'

ಚಂದನದ 'ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಶ್ರೀರಾಮನವಮಿ ಪ್ರಯುಕ್ತ ವಿಶೇಷ ಅತಿಥಿಯಾಗಿ ಗಾಯಕಿ ಚಂದ್ರಿಕಾ ಗುರುರಾಜ್ ಆಗಮಿಸಿದ್ದರು. ಅವರ ಕಂಠದಲ್ಲಿ ಮೂಡಿಬಂದ ರಾಮಸ್ಮರಣೆಯ ಗಾಯನ ಮುದ ನೀಡಿತು. ಅವರ ಕಂಠ ಮಾಧುರ್ಯವನ್ನು ಕೇಳಿಸಿಕೊಂಡ ಶಂಕರ್ ನಾಗ್ ಅವರು 'ಇಂದ್ರಜಿತ್' ಸಿನಿಮಾದಲ್ಲಿ ಹಿನ್ನೆಲೆ ಗಾಯನಕ್ಕೆ ಅವಕಾಶ ಕಲ್ಪಿಸಿದ್ದನ್ನು ಈ ಸಂದರ್ಭದಲ್ಲಿ ಸ್ಮರಿಸಿದರು. ತೆರೆಮರೆಗೆ ಸರಿಯುತ್ತಿರುವ ಕನ್ನಡದ ಹಿರಿಯ ಗಾಯಕರನ್ನು ಬೇರೆ ವಾಹಿನಿಗಳೂ ಪರಿಚಯಿಸಲಿ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಮುಗಿಯಿತು ಡ್ರಾಮಾ...

ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್' ಮುಕ್ತಾಯಗೊಂಡಿತು. ಇದರಲ್ಲಿ ಮಕ್ಕಳ ನಟನಾ ಕೌಶಲ, ಮುದ್ದು ಸಂಭಾಷಣೆ, ಅವರ ವೇಷಭೂಷಣ ಗಮನಸೆಳೆದವು. ಹೆಣ್ಣುಮಕ್ಕಳು ಬಹಳಷ್ಟು ಕಿರುನಾಟಕಗಳಲ್ಲಿ ನಟಿಸಿದ್ದು ವಿಶಿಷ್ಟವಾಗಿತ್ತು. ಪೌರಾಣಿಕ ಕಥೆಗಳನ್ನು ನಾಟಕ ರೂಪದಲ್ಲಿ ಪ್ರಸ್ತುತಪಡಿಸಿದ್ದು ಚೇತೋಹಾರಿಯಾಗಿತ್ತು.

'ಏಸುಕ್ರಿಸ್ತನನ್ನು ಶಿಲುಬೆಗೆ ಏರಿಸಿದ ಕಥೆ, ಸರ್ಕಸ್‌ನಲ್ಲಿ ಕಲಾವಿದರ ನಗುವಿನ ಹಿಂದಿನ ಅಳು, ಭಗವದ್ಗೀತೆಯಲ್ಲಿ ಕೃಷ್ಣನ ಬೋಧನೆ ಹಾಗೂ ಅರಣ್ಯದಲ್ಲಿ ಬೆಳೆದ ಮಗುವಿನ ಕಥೆ ಚೆನ್ನಾಗಿ ಮೂಡಿಬಂದವು. ತೀರ್ಪುಗಾರರಾದ ಲಕ್ಷ್ಮೀ, ರವಿಚಂದ್ರನ್ ಮತ್ತು ರಚಿತಾರಾಮ್ ಅವರ ಸಲಹೆಗಳೂ ಮಕ್ಕಳಿಗೆ ಮಾರ್ಗದರ್ಶನ ನೀಡುವಂತೆ ಇದ್ದವು.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

ವಾರದ ಪತ್ರ




## ಕಣ್ಣೀರು ಹರಿಸಿದ ಮಹಾಮಿಲನ

ಕಲರ್ಸ್ ಕನ್ನಡದಲ್ಲಿ 'ಗಿಚ್ಚಿ ಗಿಲಿಗಿಲಿ' ನೋಡ್ತಾ ಇದ್ದಾಗ ಪಾತ್ರಗಳು ಅಳ್ತಾ ಇದ್ವು; ನಾವು ಕೂತ್ಕೊಂಡು ನಗ್ತಾ ಇದ್ವಿ. ಕಳೆದ ಸಂಚಿಕೆಯಲ್ಲಿ ಪಾತ್ರಗಳೆಲ್ಲ ನಗ್ತಾ ಇದ್ರೆ ನಾವು ಅಳ್ತಾ ಇದ್ವಿ. ಅದಕ್ಕೆ ಸಾಕ್ಷಿಯಾಗಿದ್ದು 'ನಮ್ಮಮ್ಮ ಸೂಪರ್ ಸ್ಟಾರ್' ಹಾಗೂ 'ಗಿಚ್ಚಿ ಗಿಲಿಗಿಲಿ'ಯ ಮಹಾಮಿಲನ ಕಾರ್ಯಕ್ರಮ. ಉಭಯ ತಂಡದ ಸದಸ್ಯರು ವೃದ್ಧ ಪೋಷಕರ ಕರಾಳ ಬದುಕಿನ ಕಥೆಯನ್ನು ಅದ್ಭುತವಾಗಿ ನಟಿಸಿದರು.

ಅಪ್ಪ–ಅಮ್ಮ ಮಕ್ಕಳಿಗೋಸ್ಕರ ಏನೆಲ್ಲಾ ಮಾಡ್ತಾರೆ. ಮಕ್ಕಳು ದೊಡ್ಡವರಾದ ಮೇಲೆ ಅವರನ್ನು ನೋಡಿಕೊಳ್ಳುವ ವಿಚಾರದಲ್ಲಿ ಕೆಲವು ಸಲ ತಪ್ಪು ನಿರ್ಧಾರ ತೆಗೆದುಕೊಳ್ಳುತ್ತಾರೆ. ಅದು ಹಿರಿಯರ ಮನಸ್ಸನ್ನು ಹೇಗೆ ನೋಯಿಸುತ್ತದೆ ಎನ್ನುವುದನ್ನು ಪ್ರಸ್ತುತಪಡಿಸಿದ ರೂಪಕ ಕಣ್ಣಂಚಿನಲ್ಲಿ ನೀರು ಹರಿಸಿತು.

—ರಘುನಾಥ ರಾವ್ ತಾಪ್ಸೆ, ದಾವಣಗೆರೆ

## ಸಾಧಕಿಯರ ಜೀವನಗಾಥೆ

ಝೀ ಕನ್ನಡದ 'ಮಹಾನಟಿ' ರಿಯಾಲಿಟಿ ಶೋ ಚೆನ್ನಾಗಿ ಮೂಡಿಬರುತ್ತಿದೆ. ಇತ್ತೀಚಿನ ಕಂತಿನಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸಾಧನೆಯನ್ನು ಅಭಿನಯಿಸಲಾಯಿತು. ರೈತಾಪಿ ಮಹಿಳೆ, ಆಟೊ ಚಾಲಕಿ, ಅಂಧ ಮಹಿಳೆಯ ಅಭಿನಯ ಚೆನ್ನಾಗಿತ್ತು. ಕಷ್ಟಕರ ಜೀವನದಲ್ಲೂ ಅವರ ಸಮಾಜಮುಖಿ ಕೆಲಸ ಕಣ್ಣಲ್ಲಿ ನೀರು ತರಿಸಿತು. ತೀರ್ಪುಗಾರರಾದ ರಮೇಶ್ ಅರವಿಂದ್, ತರುಣ್ ಸುಧೀರ್ ಹಾಗೂ ಪ್ರೇಮಾ ಅವರ ಪ್ರಬುದ್ಧ ಮಾತುಕತೆ, ಘನತೆಯ ಮಾರ್ಗದರ್ಶನ ಕಾರ್ಯಕ್ರಮಕ್ಕೆ ಶೋಭೆ ತಂದಿದೆ.

—ಭಾರತೀ ಗಂಗಾಧರ್, ಬೆಂಗಳೂರು

ಝೀ ಕನ್ನಡದ 'ಮಹಾನಟಿ' ಉತ್ತಮ ಕಾರ್ಯಕ್ರಮ. ಅಭಿನಯದಲ್ಲಿ ಅಭಿರುಚಿ ಇರುವವರಿಗೆ ಒಂದು ಉತ್ತಮ ವೇದಿಕೆ. ಕಳೆದ ಸಂಚಿಕೆಯಲ್ಲಿ ಹೊಸತನವಿತ್ತು. ವಿವಿಧ ವೃತ್ತಿಗಳಲ್ಲಿ ತೊಡಗಿದ ಮಹಿಳೆಯರ ಜೀವನದ ನೋವು ನಲಿವುಗಳನ್ನು ಪ್ರತಿನಿಧಿಸಲಾಯಿತು.

ಡಾಕ್ಟರ್, ನರ್ಸ್, ಆಟೊ ಡ್ರೈವರ್, ಮನೆಗೆಲಸದವರು, ಗಾರ್ಮೆಂಟ್ ವರ್ಕರ್ ಮುಂತಾದವರ ದಿನಚರಿಯನ್ನು ಆಧರಿಸಿ ಅಭಿನಯಿಸಿದರು. ಇದೊಂದು ಹೊಸ ಪರಿಕಲ್ಪನೆ. ಅಂದು ಅಭಿನಯಿಸಿದ ಎಲ್ಲಾ ಸ್ಕಿಟ್ ವಾಸ್ತವಿಕ ಜೀವನಕ್ಕೆ ತುಂಬಾ ಹತ್ತಿರವಾಗಿದ್ದವು.

—ಮುರಲೀಧರ ಕುಲಕರ್ಣಿ, ಬೀದರ್

## ಸೀತಾಳದು ಬ್ರಹ್ಮರಹಸ್ಯವೆ?

ಝೀ ಕನ್ನಡದ 'ಸೀತಾರಾಮ' ಧಾರಾವಾಹಿಯಲ್ಲಿ ಶ್ರೀರಾಮ್, ಸೀತಾಳನ್ನು ಪ್ರೀತಿಸಿ ಮದುವೆಯಾಗುವ ನಿರ್ಧಾರ ತಳೆದಾಗ ಆತನ ಚಿಕ್ಕಿ ಆ ವಿಷಯವನ್ನು ಬಹಿರಂಗಪಡಿಸುತ್ತಾಳೆ. ಆದರೆ ಸೀತಾಳಿಗೆ ಮಗುವಿರುವ ವಿಷಯವನ್ನು ತಾತನಿಗೆ ತಿಳಿಸುವುದು ಬೇಡವೆನ್ನುತ್ತಾಳೆ. ಆನಂತರ ತಾತನಿಗೆ ಆಘಾತ ನೀಡಿ ಮದುವೆ ಮುರಿಯುವ ಹುನ್ನಾರ ಅವಳದು. ದೇಸಾಯಿಯವರ ಸಂಸ್ಥೆಯಲ್ಲೇ ಸೀತಾ ಬಹುಕಾಲದ ಉದ್ಯೋಗಿ. ಆದರೂ ಆಕೆಯ ಕೌಟುಂಬಿಕ ಹಿನ್ನೆಲೆ ತಿಳಿಯದಿರುವುದು ಕೌತುಕದ ವಿಷಯ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಸಂಚಿಕೆಗಳು ಓ.ಕೆ. ಮಹಾಸಂಚಿಕೆ ಏಕೆ?

ಇತ್ತೀಚೆಗೆ ಹಿರಿಯ ನಾಗರಿಕರು ಧಾರಾವಾಹಿಗಳಿಗೆ ಹೆಚ್ಚು ಅಂಟಿಕೊಂಡಿದ್ದಾರೆ ಎಂಬುದೇನೋ ನಿಜ. ಹಾಗೆಂದು ಅವುಗಳು ಚೆನ್ನಾಗಿವೆ ಎಂದು ಖಂಡಿತ ಭಾವಿಸಬೇಕಿಲ್ಲ. ಸಮಯ ಕೊಲ್ಲಲು ದಿನದ ಒಂದರ್ಧ ಗಂಟೆಗಳನ್ನು ಅವುಗಳಿಗೆ ಮೀಸಲಾಗಿಡುತ್ತಿದ್ದಾರೆ. ಇದನ್ನೇ ಬಳಸಿಕೊಂಡು ವಾಹಿನಿಗಳು ಮಹಾಸಂಚಿಕೆ ಎಂದು ದೀರ್ಘ ಅವಧಿಯ ಕಾರ್ಯಕ್ರಮ ನೀಡುತ್ತಾರೆ. ಆದರೆ ಒಂದು ಗಂಟೆ ಕಾಲ ನೋಡುವಷ್ಟು ಆಸಕ್ತಿಯನ್ನು ಯಾವುದೇ ಕತೆಗಳೂ ಉಳಿಸಿಕೊಂಡಿಲ್ಲ.

ಮೊದಲಿಗೆ ಸಾಂಸಾರಿಕ ಸಂಕಷ್ಟ, ರಮ್ಯತೆಯನ್ನು ನಿರೂಪಿಸುವ ಕತೆಗಳು ಕ್ರಮೇಣ ಕ್ರೂರತೆಗೆ ತಿರುಗುತ್ತವೆ. ಮನೆಯ ಸದಸ್ಯರನ್ನು ಕೊಲ್ಲಲು ಸುಪಾರಿ ಕೊಡುವಷ್ಟರ ಮಟ್ಟಿಗೆ ಬೆಳೆಯುತ್ತಿವೆ. ಜೊತೆಗೆ ತ್ರಿಕೋನ ಪ್ರೇಮ, ಖಳನಾಯಕಿಯರ ಅಟ್ಟಹಾಸ ಕಂಡು ಧಾರಾವಾಹಿಗಳೆಂದರೆ ಜುಗುಪ್ಸೆ ಹುಟ್ಟುವ ಹಾಗೆ ಆಗಿಬಿಟ್ಟಿದೆ. ಮಹಾಸಂಚಿಕೆಗಳೆಂದು ಹೆಸರಿಟ್ಟು, ಬೇರೊಂದು ಧಾರಾವಾಹಿಗಳ ನಾಯಕಿಯರನ್ನು ಕರೆತಂದು ಅನವಶ್ಯಕವಾಗಿ ಕತೆಯನ್ನು ಬೆಳೆಸುವ ಪ್ರಯತ್ನ ಬೇಡ.

—ಶ್ರುತಿ ಎಸ್., ಬೆಂಗಳೂರು